ಅಸಲು ದಾವೆ ನಂ.15/2021

ಪಿ.ಡಬ್ಲೂಃ 2- ಎಂ. ಮಗೇಂದ್ರನ್ ಬಿನ್ ಮುರುಗೇಶ್

ದಿನಾಂಕಃ 27/03/2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು 1 ಮತ್ತು 2 ನೇ ಪ್ರತಿವಾದಿಯರ ಪರವಾಗಿ ಶ್ರೀ ಪಿ.ಆರ್. ವಕೀಲರಿಂದ**

1. ನಾನು 1992 ರಿಂದ ವಕೀಲ ವೃತ್ತಿಯನ್ನು ಮಾಡುತ್ತಿರುತ್ತೇನೆ. ನನಗೆ 2003 ರಲ್ಲಿ ಮೊದಲನೇ ಸಲ ಕಮಲಮ್ಮ ಕೋಂ ಟಿ. ನಾರಾಯಣ ಮೂರ್ತಿ ರವರ ಪರಿಚಯವಾಯಿತು. ಅವರು ತಮ್ಮ ವ್ಯಯಕ್ತಿಕ ಕೆಲಸಕ್ಕಾಗಿ ಕೆಜಿಎಫ್ ನ್ಯಾಯಾಲಯಕ್ಕೆ ಬಂದಾಗ ನನಗೆ ಅವರ ಪರಿಚಯವಾಗಿರುತ್ತದೆ. ನನಗೆ ಸದರಿಯವರ ಕುಟುಂಬದ ಬಗ್ಗೆ ಸಂಪೂರ್ಣ ವ್ಯಯಕ್ತಿಕ ಮಾಹಿತಿ ಇರುವುದಿಲ್ಲ ಆದರೆ ಅವರ ಗಂಡ ಮರಣ ಹೊಂದಿದ್ದು ಅವರಿಗೆ ಇಬ್ಬರು ಗಂಡು ಮಕ್ಕಳು ಇರುತ್ತಾರೆ ಎಂದು ಅವರು ನನಗೆ ತಿಳಿಸಿದ್ದರು. ಅವರಿಗೆ ಹೆಣ್ಣು ಮಕ್ಕಳು ಇರುವ ಬಗ್ಗೆ ಅವರು ನನಗೆ ಏನೂ ತಿಳಿಸಿರಲಿಲ್ಲ. ಅವರು ವಿಲ್ ತಯಾರಿಸಿಕೊಳ್ಳಲು ನ್ಯಾಯಾಲಯಕ್ಕೆ ಬಂದಿದ್ದರು.

2. ಸಾಮಾನ್ಯವಾಗಿ ಒಂದು ವಿಲ್ ಬರೆಯುವಾಗ ಆಸ್ತಿಗೆ ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನು ನೋಡಿ ಪರಿಶೀಲಿಸಿ ಬರೆಯುತ್ತಾರೆ ಎಂದರೆ ಸರಿ. ಅದೇ ರೀತಿ ವಿಲ್ ಬರೆದು ಕೊಡಲು ಉದ್ದೇಶಿಸಿರುವ ವ್ಯಕ್ತಿಗೆ ಎಷ್ಟು ಜನ ವಾರಸುದಾರರು ಇರುತ್ತಾರೆ ಎಂದು ತಿಳಿದುಕೊಳ್ಳುತ್ತಾರೆ ಎಂದರೆ ಸರಿ. ಕಮಲಮ್ಮ ರವರು ಆ ದಿನ ಒಬ್ಬ ರಾಮನಾಗರಾಜ್ ಎಂಬುವವರ ಜೊತೆ ನ್ಯಾಯಾಲಯಕ್ಕೆ ಬಂದಿದ್ದರು. ಸದರಿ ದಿನಾಂಕಕ್ಕೂ ಮುಂಚೆ ನನಗೆ ಸದರಿ ರಾಮನಾಗರಾಜ್ ರವರ ಪರಿಚಯವಿರಲಿಲ್ಲ. ನಾನು ನಿಪಿ-20 ವಿಲ್ ಗೆ ಬಿಕ್ಲಂದಾರರಾಗಿ ಸಹಿ ಮಾಡಿರುತ್ತೇನೆ ಹೊರತು ಸಾಕ್ಷಿದಾರರಾಗಿ ಅಲ್ಲ. ಸಾಮಾನ್ಯವಾಗಿ ಸಾಕ್ಷಿ ಎಂದರೆ ಬೇರೆ ಮತ್ತು ಬಿಕ್ಲಂದಾರ ಎಂದರೆ ಬೇರೆ ಎಂದರೆ ಸರಿ.

3. ನಿಪಿ-20 ದಾಖಲೆಯನ್ನು ಬರೆಯಲು ನನಗೆ ಕಮಲಮ್ಮರವರೇ ನ್ಯಾಯಾಲಯದಲ್ಲಿ ಮಾಹಿತಿ ಕೊಟ್ಟಿದ್ದರು. ಸದರಿಯವರು ಒಂದು ದಿನ ನ್ಯಾಯಾಲಯಕ್ಕೆ ಬಂದು ನನ್ನ ಹತ್ತಿರ ವಿಚಾರಗಳನ್ನು ತಿಳಿದು ಹೋಗಿ ಒಂದು ವಾರದ ನಂತರ ಬಂದು ದಾಖಲೆ ಬರೆಯಿಸಿಕೊಂಡಿರುತ್ತಾರೆ. ನಾನು ನಿಪಿ-20 ರಲ್ಲಿ ಒಂದು ಕೈಗಾರಿಕಾ ಕಾರ್ಖಾನೆ ಇರುತ್ತದೆ ಎಂದು ಕಮಲಮ್ಮ ರವರ ಹೇಳಿಕೆಯ ಮೇರೆಗೆ ಬರೆದಿರುತ್ತೇನೆ ಮತ್ತು ಆ ಬಗ್ಗೆ ದಾಖಲೆಗಳನ್ನು ನೋಡಿರುವುದಿಲ್ಲ. ಅವರು ಮೊದಲನೇ ಸಲ ನನಗೆ ಭೇಟಿ ಆದಾಗ ನಾನು ಅವರಿಗೆ ಎಲ್ಲಾ ಸಂಬಂಧಪಟ್ಟ ದಾಖಲೆಗಳನ್ನು ತರಬೇಕು ಎಂದು ಹೇಳಿದ್ದೆ. ನಾನು ನಿಪಿ-20 ದಾಖಲೆಯನ್ನು ಬೆರಳಚ್ಚು ಮಾಡಲಾಗಿರುತ್ತದೆ. ನಾನು ಅದನ್ನು ನ್ಯಾಯಾಲಯದ ಸಂಕೀರ್ಣದಲ್ಲಿ ಇದ್ದ ಸುಬ್ಬಾರಾವ್ ಎಂಬ ಬೆರಳಚ್ಚುಗಾರರ ಹತ್ತಿರ ಬೆರಳಚ್ಚು ಮಾಡಿಸಿರುತ್ತೇನೆ. ನಮ್ಮ ಕೆಜಿಎಫ್

ವಕೀಲರ ಸಂಘದ ಕಚೇರಿಯಲ್ಲಿ ಗಣಕಯಂತ್ರ 2015 ರ ನಂತರ ಬಂದಿರುತ್ತದೆ. ಮೇಲೆ ಹೇಳಿದ ಸುಬ್ಬಾರಾವ್ ಹತ್ತಿರ ಗಣಕಯಂತ್ರ ಇರಲಿಲ್ಲ ಮತ್ತು ಕೇವಲ ಬೆರಳಚ್ಚು ಯಂತ್ರ ಇದ್ದು ಅವರು ಗಣಕಯಂತ್ರದಲ್ಲಿ ಮಾಡಿದಂತೆ ಬೆರಳಚ್ಚು ಯಂತ್ರದಲ್ಲಿ ದಾಖಲೆ ಬೆರಳಚ್ಚು ಮಾಡುತ್ತಿದ್ದರು. ನಾನು ವಿಲ್ ತಯಾರಿಸುವಾಗ ಕಮಲಮ್ಮ ರವರು ನನಗೆ ಯಾವುದೇ ದಾಖಲೆಗಳನ್ನು ಕೊಟ್ಟಿರಲಿಲ್ಲ ಮತ್ತು ಕೇವಲ ಒಂದು ಚೀಟಿಯಲ್ಲಿ ಸ್ವತ್ತುಗಳ ಮಾಹಿತಿಯನ್ನು ಬರೆದು ಕೊಟ್ಟಿದ್ದರು. ನಾನು ನಿಪಿ–20 ದಾಖಲೆ ಅಂತಿಮವಾಗಿ ತಯಾರಿಸಿಕೊಳ್ಳುವ ಮೊದಲು ಒಂದು ಕರಡು ಪ್ರತಿ ತಯಾರಿಸಿದ್ದೆ. ಸದರಿ ಕರಡು ಪ್ರತಿಯನ್ನು ನಾನು ನನ್ನ ಹತ್ತಿರ ಇಟ್ಟುಕೊಂಡು ನಿಪಿ–20 ದಾಖಲೆಯನ್ನು ತಯಾರಿಸಿ ಅದನ್ನು ಕಮಲಮ್ಮ ರವರಿಗೆ ಕೊಟ್ಟಿರುತ್ತೇನೆ.

4. ದಿನಾಂಕ 07.02.2023 ರಂದು ಕಮಲಮ್ಮ ರವರು ದಾವಾ ಸ್ವತ್ತಿಗೆ ಮಾಲಿಕರಾಗಿರಲಿಲ್ಲ ಕಾರಣ ಅದನ್ನು ದಿನಾಂಕ 08.11.2004 ರಂದು ಅವರ ಹೆಸರಿನಲ್ಲಿ ಖರೀದಿಸಲಾಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಕಮಲಮ್ಮ ರವರು ತಮ್ಮ ಗಂಡ ಮಕ್ಕಳ ಹೆಸರು ಮುರಳಿ ಕೃಷ್ಣ ಮತ್ತು ಮಂಜುನಾಥ ಆಗಿರುತ್ತದೆ ಎಂದು ನನಗೆ ಹೇಳಿದ್ದರು. ಸದರಿ ಇಬ್ಬರಲ್ಲಿ ಯಾರೂ ನನಗೆ ಪರಿಚಯವಿರುವುದಿಲ್ಲ. ಸದರಿ ಮುರಳಿ ಕೃಷ್ಣ ಅಂದರೆ ಈ ದಾವೆಯ ವಾದಿ ನನ್ನ ಸ್ನೆಹಿತನಾಗಿರುವುದರಿಂದ ನಾನು ಅವರ ಮಾತಿನ ಮೇರೆಗೆ ನಿಪಿ–20 ರಂತೆ ಸುಳ್ಳು ವಿಲ್ ನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ.

5. ನಿಪಿ–20 ದಾಖಲೆಯನ್ನು ಬರೆಯಲು ಕಮಲಮ್ಮ ರವರೇ ಛಾಪಾ ಕಾಗದವನ್ನು ತಂದಿದ್ದರು. ಕಮಲಮ್ಮ ರವರು ನನಗೆ ಮೊದಲನೇ ಸಲ ಭೇಟಿ ಆದಾಗ ನಾನು ಅವರಿಗೆ ವಿಲ್ ಬರೆಯಲು ಛಾಪಾ ಕಾಗದದ ಅವಶ್ಯಕತೆ ಇರುತ್ತದೆ ಎಂದು ಹೇಳಿದ್ದೆ ಮತ್ತು ಆಗ ಅವರು ಛಾಪಾ ಕಾಗದ ಅವರ ಹತ್ತಿರ ಇರುತ್ತದೆ ಎಂದು ನನಗೆ ತಿಳಿಸಿದ್ದರು. ಸಾಮಾನ್ಯವಾಗಿ ಒಂದು ವಿಲ್ ಗೆ ಇಬ್ಬರು ಸಾಕ್ಷಿದಾರರು ಇರಬೇಕಾಗುತ್ತದೆ ಎಂದರೆ ಸರಿಯಲ್ಲ ಆದರೆ ಒಬ್ಬರು ಇದ್ದರೂ ಸಾಕು. ಈಗ ನನಗೆ ತೋರಿಸಿದ ನಿಪಿ–2 ದಾಖಲೆಯ 2 ನೇ ಪುಟದಲ್ಲಿರುವ ಫೋಟೋದಲ್ಲಿ ಇರುವ ಮಹಿಳೆಯೇ ಕಮಲಮ್ಮ ಆಗಿದ್ದು ಅವರೇ ನನ್ನ ಹತ್ತಿರ ವಿಲ್ ತಯಾರಿಸಿಕೊಳ್ಳಲು ಬಂದಿದ್ದರು. ನಿಪಿ–2 ರಲ್ಲಿರುವ ಸಹಿ ಮತ್ತು ನಿಪಿ–20 ರಲ್ಲಿರುವ ಸಹಿ ಬೇರೆ ಬೇರೆ ಆಗಿರುತ್ತವೆ ಎಂದರೆ ಸರಿಯಲ್ಲ. ನಾನು ವಿಲ್ ತಯಾರಿಸಿ ಕೊಡುವಾಗ ಕಮಲಮ್ಮ ರವರಿಗೆ ಹೆಣ್ಣು ಮಕ್ಕಳು ಇದ್ದರು ಎಂದು ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ.

6. ನಿಪಿ–20 ಕ್ಕೆ ಸಾಕ್ಷಿದಾರರಾದ ರಾಮನಾಗರಾಜ್ ರವರು ಕೆಜಿಎಫ್ ನವರಾಗಿರುತ್ತಾರೆ ಆದರೆ ಅವರು ಏನು ಮತ್ತು ಎಲ್ಲಿ ಕೆಲಸ ಮಾಡುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಕಮಲಮ್ಮ ರವರು ನನಗೆ ಯಾವತ್ತೂ ಭೇಟಿ ಆಗಿರುವುದಿಲ್ಲ, ವಿಲ್ ತಯಾರಿಸಿ

ಕೊಡಲು ನನಗೆ ಯಾವತ್ತೂ ಕೇಳಿರುವುದಿಲ್ಲ ಮತ್ತು ನಾನು ಯಾವತ್ತೂ ಅವರಿಗೆ ವಿಲ್ ಬರೆದುಕೊಟ್ಟಿರುವುದಿಲ್ಲ ಹೊರತು ವಾದಿಯ ಮಾತು ಕೇಳಿ ನಿಪಿ–20 ದಾಖಲೆಯನ್ನು ತಯಾರಿಸಿಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಿಪಿ–20 ಕ್ಕೆ ಕಮಲಮ್ಮ ರವರು ಯಾವತ್ತೂ ಸಹಿ ಮಾಡಿರುವುದಿಲ್ಲ ಮತ್ತು ಅದರಲ್ಲಿರುವ ಸಹಿಗಳು ಅವರಿಗೆ ಸೇರಿರುವುದಿಲ್ಲ ಎಂದರೆ ಸರಿಯಲ್ಲ. ವಿಲ್ ಬರೆಯಲು ಕಮಲಮ್ಮ ರವರಿಗೆ ಅದರಲ್ಲಿ ನಮೂದಿಸಿರುವ ಸ್ವತ್ತುಗಳ ಮೇಲೆ ಯಾವುದೇ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನಿಪಿ–20 ರಲ್ಲಿರುವ ಸಾಕ್ಷಿದಾರರ ಸಹಿ ರಾಮನಾಗರಾಜ್ ರವರ ಸಹಿ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಈಗ ಸದರಿ ರಾಮನಾಗರಾಜ್ ರವರು ಜೀವಂತ ಇರುತ್ತಾರೆಯೋ ಅಥವಾ ಇಲ್ಲವೋ ಎಂದು ನನಗೆ ಗೊತ್ತಿರುವುದಿಲ್ಲ. ನಾನು ವಾದಿಗೆ ಸಹಾಯ ಮಾಡಲು ಸುಳ್ಳು ದಾಖಲೆ ತಯಾರಿಸಿ ಈಗ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

(ಮುಜಫರ್)
ಹಿರಿಯ ಸಿ.ಜೆ. ಮತ್ತು ಪ್ರಧಾನ ಜೆಎಂಎಫ್‌ಸಿ
ಕೆಜಿಎಫ್